# ಸಮಾಜ ವಿಜ್ಞಾನ

**ತರಗತಿ : 10 ನೇ ತರಗತಿ** **ಮಾದರಿ ಪ್ರಶ್ನೆ ಪತ್ರಿಕೆ –2** **ಅಂಕಗಳು : 80**

**ವಿಷಯ: ಸಮಾಜ ವಿಜ್ಞಾನ (85k)** **ಸಮಯ : 3–15 ನಿಮಿಷ.**

**I ಬಹು ಆಯ್ಕೆ ಪ್ರಶ್ನೆಗಳು. 8*1=8**

1) ಭಾರತದ ಈ ಭಾಗದ ಪ್ರದೇಶವನ್ನು ಪಾಕ್ ಆಕ್ರಮಿತ ಪ್ರದೇಶವೆಂದು ಕರೆಯುವರು– **ಬಿ) ವಾಯುವ್ಯ ಪ್ರದೇಶ.**

2) ಪ್ರಥಮ ಮಹಾಯುದ್ಧದ ನಂತರ ಸಂಭವನೀಯ ಯುದ್ಧ ತಡೆಯಲು ರಚಿಸಿದ ಸಂಸ್ಥೆ – **ಸಿ) ರಾಷ್ಟ್ರ ಸಂಘ**

3) ಕರ್ನಾಟಕ ಸರ್ಕಾರ ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ ಜಾರಿಗೆ ತಂದ ಕಾರ್ಯಕ್ರಮ – **ಎ) ಸ್ತ್ರೀ ಶಕ್ತಿ.**

4) ಅಸಂಘಟಿತ ಕೆಲಸಗಾರರಿಗೆ ಉದಾಹರಣೆ –**ಬಿ) ವಾಹನ ರಿಪೇರಿಗಾರರು.**

5) ಕಾಗೆ ಬಂಗಾರ ಎಂದು ಕರೆಯುವ ಖನಿಜ– **ಡಿ) ಅಭ್ರಕ**

6) ಭಾರತದ ಹೆಬ್ಬಾಗಿಲು ಎಂದು ಕರೆಯುವ ಬಂದರು – **ಎ) ಮುಂಬಯಿ.**

7) "ಎಲ್ಲರನ್ನು ಒಳಗೊಂಡ ಬೆಳವಣಿಗೆ" ಇದು ಈ ಪಂಚವಾರ್ಷಿಕ ಯೋಜನೆಯ ಗುರಿ – **ಬಿ) 11ನೇ ಪಂಚವಾರ್ಷಿಕ ಯೋಜನೆ.**

8) **ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನುಸ್ಥಾಪಿಸಲಾಗಿದೆ – ಎ)** ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆ ಸ್ಥಾಪಿಸಲು ಸ್ಥಾಪಿಸಲಾಗಿದೆ.

**II ಒಂದು ವಾಕ್ಯದಲ್ಲಿ ಉತ್ತರಿಸಿರಿ 8*1=08**

9) **ಹೈದರಾಬಾದಿನ ನಿಜಾಮನು ಭಾರತದ ಒಕ್ಕೂಟ ಸೇರಲು ಏಕೆ ನಿರಾಕರಿಸಿದನು?**
ಉತ್ತರ: ಸ್ವತಂತ್ರವಾಗುಳಿಯುವ ಉದ್ದೇಶದಿಂದ ನಿರಾಕರಿಸಿದನು.

10) **ಎರಡನೇ ಮಹಾಯುದ್ದದಲ್ಲಿ ಜಪಾನ್ ಪೂರ್ಣವಾಗಿ ಶರಣಾಯಿತು. ಏಕೆ?**
ಉತ್ತರ : ಜಪಾನಿನ ಹಿರೋಷಿಮಾ ಮತ್ತು ನಾಗಾಸಾಕಿ ಮೇಲೆ ಅಮೆರಿಕಾ ಅಣುಬಾಂಬನ್ನು ಹಾಕಿತು.

11) **ಭಾರತ &ಪಾಕಿಸ್ತಾನ ಉತ್ತಮ ಬಾಂಧವ್ಯ ಹೊಂದಿಲ್ಲ.ಏಕೆ?**
ಉತ್ತರ: ಮಿಲಟರಿ ಶಾಹಿತ್ವ ಮತ್ತು ರಾಜಕೀಯ ಅಸ್ಥಿರತೆ.

12) ಬಾಲ್ಯವಿಹಾಹ ತಡೆಗಟ್ಟಲು ನೀಡಿರುವ ಸಹಾಯವಾಣಿ ಯಾವುದು? ಉತ್ತರ: **1098.**

13) **ಸರ್ವ ಶಿಕ್ಷಣ ಅಭಿಯಾನವು ಬಾಲಕಾರ್ಮಿಕತೆ ನಿವಾರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಹೇಗೆ?**
ಉತ್ತರ: ಕೂಲಿಯಿಂದ ಶಾಲೆಗೆ ಕಾರ್ಯಕ್ರಮ ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ದಾಖಲಿಸಿಕೊಂಡು ಉಚಿತ ಶಿಕ್ಷಣ ನೀಡುತ್ತದೆ.

14) **ಗಣಿಗಾರಿಕೆ ಪ್ರದೇಶದಲ್ಲಿ ಭೂಕುಸಿತ ಉಂಟಾಗಲು ಕಾರಣವೇನು?**
ಉತ್ತರ : ಆಳದಲ್ಲಿರುವ ಅದಿರಿನ ನಿಕ್ಷೇಪದವರೆಗೆ ಗಣಿಗಳನ್ನು ತೆಗೆದಿದ್ದರಿಂದ ಉಂಟಾಗುತ್ತವೆ.

15) **ಹೂಡಿಕೆ ಹಿಂತೆಗೆತ ಎಂದರೇನು?**
ಉತ್ತರ: ಸರಕಾರವು ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿರುವ ತನ್ನ ಬಂಡವಾಳವನ್ನು ಹಿಂದಕ್ಕೆ ಪಡೆಯುವುದಾಗಿದೆ.

16) **ಬ್ಯಾಂಕುಗಳ ಉದ್ಯಮದಲ್ಲಿ ಇತ್ತೀಚಿನ ಪ್ರಮುಖ ಬೆಳವಣಿಗೆ ಯಾವುದು?**
ಉತ್ತರ : ಅಂಚೆ ಕಛೇರಿಗಳನ್ನು ಬ್ಯಾಂಕ್ ವ್ಯವಹಾರದ ಅಂಕಿತದೊಳಕ್ಕೆ ತಂದಿರುವುದು.

**III ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ. 8*2=16**

17) **ದಯಾನಂದ ಸರಸ್ವತಿಯವರು "ದೇಶ ಮತ್ತು ಭಾರತೀಯ ಸಂಸ್ಕೃತಿಯ ಅಭಿಮಾನಿಯಾಗಿದ್ದರು" ಸಮರ್ಥಿಸಿರಿ.**

- ಸ್ವರಾಜ್ಯ ಮತ್ತು ಸ್ವಧರ್ಮಗಳ ಬಗ್ಗೆ ಬೋಧನೆ.
- ಸ್ವಾತಂತ್ರ ಹೋರಾಟದಲ್ಲಿ ತೊಡಗಲು ಪ್ರೇರಣೆ.
- ಮಹಾನ್ ದೇಶಭಕ್ತರು.
- ಭಾರತೀಯ ಸಂಸ್ಕೃತಿಯ ಅಭಿಮಾನಿ.
- ಸ್ವಾಭಿಮಾನ ಮತ್ತು ಸ್ವಾವಲಂಬನೆಗೆ ಪ್ರೇರಣೆ.

18) **1857ರ ದಂಗೆಗೆ ಆರ್ಥಿಕ ಕಾರಣಗಳನ್ನು ಪಟ್ಟಿ ಮಾಡಿರಿ.**

- ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿ.
- ತಾಲೂಕಾದರರಿಗೆ ನೀಡಿದ ಕಂದಾಯ ವಸೂಲಿ ಹಕ್ಕಿನ ಹಿಂಪಡೆತ.
- ಭಾರತದ ವಸ್ತುಗಳ ಮೇಲೆ ಅಧಿಕ ತೆರಿಗೆ.
- ಗೃಹ ಕೈಗಾರಿಕೆಗಳ ಅವನತಿ.
- ಕಾರ್ಮಿಕರ ನಿರುದ್ಯೋಗ.
- ಇನಾಂ ಭೂಮಿ ವಾಪಸಾತಿ.
- ಜಮೀನ್ದಾರಿಂದ ರೈತರ ಶೋಷಣೆ.
- ಕೃಷಿಕರ ಆರ್ಥಿಕ ಸಂಕಷ್ಟ ಮತ್ತು ಅವಮಾನ.

19) **ಅನಕ್ಷರತೆ ನಿವಾರಿಸಲು ಸರಕಾರ ಕೈಗೊಂಡ ಕಾರ್ಯಕ್ರಮ ಗಳಾವುವು?**

- ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ. (2001)
- ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ.
- ರಾಷ್ಟ್ರೀಯ ಸಾಕ್ಷರತಾ ಮಿಷನ್ ಸ್ಥಾಪನೆ. (1988)
- ಸಾಕ್ಷರ ಭಾರತ ಕಾರ್ಯಕ್ರಮ.
- ಶಿಕ್ಷಣ ಮೂಲಭೂತ ಹಕ್ಕು ಎಂದು ಘೋಷಣೆ.
- ಶಿಕ್ಷಣ ಹಕ್ಕು ಕಾಯ್ದೆ ಜಾರಿ. (2009)
- ವಿಕಲಚೇತನರ ಶಿಕ್ಷಣ.

**ಅಥವಾ**

**ಮಾನವ ಹಕ್ಕುಗಳ ಪ್ರತಿಪಾದನೆಯಲ್ಲಿ ಭಾರತ ಪ್ರಮುಖ ಪಾತ್ರವಹಿಸುತ್ತದೆ.' ಸ್ಪಷ್ಟೀಕರಿಸಿ.**

- ಸಾರ್ವತ್ರಿಕ ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆ.
- ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳ ನಮೂದು.
- ಸಾಮಾನ್ಯ ಸಭೆಯಲ್ಲಿ ಮಾನವ ಹಕ್ಕುಗಳ ಪ್ರತಿಪಾದನೆ.
- ಭಾರತದಿಂದ ಜನಾಂಗ ಹತ್ಯೆ, ಶೋಷಣೆ & ದಬ್ಬಾಳಿಕೆಗೆ ವಿರೋಧ
- ಜಾಗತಿಕ ವೇದಿಕೆಗಳ ಮೂಲಕ ಮಾನವ ಹಕ್ಕುಗಳ ರಕ್ಷಣೆಗೆ ಯತ್ನ.

**20) ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು. ಹೇಗೆ?**

- ಅಸ್ಪೃಶ್ಯರು ಸಮಾಜದ ಕಡೆಯ ಹಂತದವರು.
- ಸಮಾಜದ ಅಮಾನುಷ ಆಚರಣೆ.
- ಗಾಂಧೀಜಿ ಪ್ರಕಾರ ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದಿದ್ದಾರೆ.
- ರಾಜಕೀಯ ಭಾಗವಹಿಸುವಿಕೆ ನಿರಾಕರಣೆ.
- ಇದು ಹಿಂದೂ ಸಮಾಜಕ್ಕೆ ಅಂಟಿದ ಕುಷ್ಠರೋಗದಂತೆ.
- ಅಮಾನವೀಯವಾದುದು.
- ಅಸ್ಪೃಶ್ಯರ ಸಾಮಾಜಿಕ ಚಲನೆಯ ನಿಯಂತ್ರಣ.

**ಅಥವಾ**

**ಇತ್ತೀಚಿಗೆ ಅರಣ್ಯ ನಾಶ ಮತ್ತು ಪರಿಸರ ಮಾಲಿನ್ಯ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಏಕೆ?**

- ಅಧಿಕ ಜನಸಂಖ್ಯೆ.
- ನಗರಗಳ ಬೆಳವಣಿಗೆ.
- ಕೈಗಾರಿಕಾ ಅಭಿವೃದ್ಧಿ.
- ತಾಂತ್ರಿಕ ಪ್ರಗತಿ.
- ಸಾರಿಗೆ ವ್ಯವಸ್ಥೆ ಬೆಳವಣಿಗೆ

**21) ಬೇಸಿಗೆ ಕಾಲದ ಹವಾಮಾನದ ಲಕ್ಷಣಗಳನ್ನು ವಿವರಿಸಿರಿ.**

- ಅಧಿಕ ಬಿಸಿಲು.
- ದೀರ್ಘ ಹಗಲು.
- ಉತ್ತರ ಭಾರತದಲ್ಲಿ ಅಧಿಕ ಉಷ್ಣಾಂಶ.
- ದಕ್ಷಿಣ ಭಾರತದಲ್ಲಿ ಉಷ್ಣಾಂಶದಲ್ಲಿ ಇಳಿಕೆ.
- ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಮಳೆ ಸಂಭವ.
- ಗಂಗಾನಗರ ಅಧಿಕ ಉಷ್ಣಾಂಶ ದಾಖಲಾದ ಸ್ಥಳ.

**22) ಮಳೆಕೊಯ್ಲು ನೀರಿನ ಸಂಗ್ರಹಣೆ ಇಂದು ಕಡ್ಡಾಯವಾಗಿದೆ. ಏಕೆ?**

- ತಾರತಮ್ಯದಿಂದ ಕೂಡಿದ ಜಲಸಂಪತ್ತಿನ ಹಂಚಿಕೆ.
- ಕಡಿಮೆ ಮಳೆಗಾಲದ ಅವಧಿ.
- ಹೆಚ್ಚು ಮಳೆ ಬೀಳುವ ಪ್ರದೇಶಗಳುಸಹ ದೀರ್ಘ ಮಳೆರಹಿತ ಪ್ರದೇಶಗಳಾಗಿ ನಿರ್ಮಾಣವಾಗುತ್ತಿರುವುದು.
- ಬೇಸಿಗೆ ಕಾಲದಲ್ಲಿ ನೀರಿನ ಕೊರತೆ.

**23) ಗ್ರಾಮೀಣ ಭಾಗದಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ಏಕೆ ಸ್ಥಾಪಿಸಲಾಗಿದೆ?**

- ಮಹಿಳೆಯರ ಸಂಘಟನೆ ಮಾಡಲು
- ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ಸ್ಥಾಪಿಸಿದೆ.

**24) ವಿಶ್ವ ಗ್ರಾಹಕರ ದಿನಾಚರಣೆಯನ್ನು ಕುರಿತು ವಿವರಿಸಿರಿ.**

- ಮಾರ್ಚ15ನ್ನುವಿಶ್ವಗ್ರಾಹಕ ದಿನವನ್ನಾಗಿ ಆಚರಿಸುತ್ತಾರೆ.
- 1962ರಲ್ಲಿ ಅಮೇರಿಕಾದ ಅಧ್ಯಕ್ಷರಾದ ಕೆನಡಿಯವರಿಂದ ಅಲ್ಲಿನ ನಾಗರಿಕರಿಗೆ ಸುರಕ್ಷತೆ, ಮಾಹಿತಿ, ನಿವೇದನೆ, ಪರಿಹಾರ ಹಕ್ಕುಗಳ ವಿಧೇಯಕ ಅಂಗೀಕಾರ.

**IV ಐದು–ಆರು ವಾಕ್ಯದಲ್ಲಿ ಉತ್ತರಿಸಿರಿ. 9*3=27**

**25) ಮಾರ್ತಾಂಡ ವರ್ಮನು ಸಂಸ್ಥಾನವನ್ನು'ವಿಶ್ವ ತಿರುವಾಂಕೂರು ಸಂಸ್ಥಾನ'ವೆಂದು ಹೆಸರಾಗುವಂತೆ ಮಾಡಿದನು. ಹೇಗೆ?**

- ವೈನಾಡ ಮತ್ತು ಸುತ್ತಲಿನ ಸಂಸ್ಥಾನ ಡಚ್ಚರಿಂದ ರಕ್ಷಣೆ.
- ಕರಿಮೆಣಸು ಬೆಳೆಯುವ ಪ್ರದೇಶದ ವಶ.
- ವೈನಾಡ ಸಂಸ್ಥಾನದ ಅಭಿವೃದ್ಧಿ.
- ಪದ್ಮನಾಭಪುರದಿಂದ ತಿರುವನಂತಪುರಕ್ಕೆ ರಾಜಧಾನಿ ಸ್ಥಳಾಂತರ.
- ತನ್ನ ರಾಜ್ಯ ತಿರುವಾಂಕೂರು ಸಂಸ್ಥಾನವಾಗಿ ಮಾರ್ಪಾಡು.
- ಗಡಿ ರಕ್ಷಣೆಗೆ 50 ಸಾವಿರ ಸೈನ್ಯ ರಚನೆ.

**ಅಥವಾ**

**ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು?**

- ದೇಶೀಯ ರಾಜರು ಬ್ರಿಟಿಷ್ ಸೈನ್ಯ ತುಕಡಿಯನ್ನು ರಾಜ್ಯದಲ್ಲಿ ಇಟ್ಟುಕೊಳ್ಳಬೇಕು.
- ಸೇನೆಯ ವೇತನ & ನಿರ್ವಹಣೆ ವೆಚ್ಚ ರಾಜ್ಯವೇ ಭರಿಸಬೇಕು.
- ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟ್‌ನ ನೇಮಕ.
- ಯುದ್ಧ ಅಥವಾ ಸಂಧಾನಕ್ಕೆ ಗವರ್ನರ ಜನರಲ್‌ನ ಸಮ್ಮತಿ ಕಡ್ಡಾಯ.
- ರಾಜನು ಆಸ್ಥಾನದಲ್ಲಿ ಇತರ ಯುರೋಪಿಯನ್ನರನ್ನು ನೇಮಿಸಿಕೊಳ್ಳುವಂತಿಲ್ಲ.
- ಕಂಪನಿಗೆ ರಾಜ್ಯ ರಕ್ಷಣೆಯ ಜವಾಬ್ದಾರಿ ಇತ್ತು.

**26) ಮೂರನೆ ಆಂಗ್ಲೋ– ಮೈಸೂರು ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿರಿ.**

➢ **ಕಾರಣಗಳು**

- ತಿರುವಾಂಕೂರ ರಾಜಕಾರಣದ ಪ್ರಶ್ನೆ.
- ತಿರುವಾಂಕೂರು ರಾಜನಿಂದ ಕೊಚ್ಚಿಯಲ್ಲಿ ಕೋಟೆ ನಿರ್ಮಾಣ.
- ತಿರುವಾಂಕೂರು ರಾಜನು ಡಚ್ಚರಿಂದ ಆಯಕೋಟಾ & ಕಾಂಗನೂರ ಕೋಟೆ ಪಡೆದನು.
- ಮಂಗಳೂರು ಒಪ್ಪಂದದ ಉಲ್ಲಂಘನೆ.

➢ **ಪರಿಣಾಮಗಳು**

- ಮರಾಠರು, ನಿಜಾಮನಿಂದ ಬ್ರಿಟಿಷರಿಗೆ ಸಹಾಯ.
- ಶ್ರೀರಂಗಪಟ್ಟಣ ಒಪ್ಪಂದದಿಂದ ಯುದ್ದ ಮುಕ್ತಾಯ.
- ಟಿಪ್ಪುವಿಗೆ ಹಿನ್ನಡೆ.
- ಟಿಪ್ಪು ಅರ್ಧರಾಜ್ಯ ಬ್ರಿಟಿಷರಿಗೆ ಬಿಟ್ಟು ಕೊಟ್ಟನು.
- ಟಿಪ್ಪು ಗ್ಯಾರಂಟಿಯಾಗಿ ತನ್ನಿಬ್ಬರು ಮಕ್ಕಳನ್ನು ಒತ್ತೆ ಇಟ್ಟನು.
- ಟಿಪ್ಪು ಬ್ರಿಟಿಷ್‌ರಿಗೆ 3 ಕೋಟಿ ಯದ್ದ ನಷ್ಟ ನೀಡಿದನು.

**27) ಸ್ವಾತಂತ್ರ್ಯ ಹೋರಾಟದಲ್ಲಿ ಗಾಯಿಡಿನ್ ಲೂ ಪಾತ್ರವೇನು?**

- ಈಶಾನ್ಯ ಭಾರತದ ಮಹಿಳೆಯರನ್ನು ಸೇರಿಸಿ ಹೊಸ ಪಡೆ ರಚನೆ.
- ಬ್ರಿಟಿಷರ ವಿರುದ್ಧ ಹೋರಾಟ ಆರಂಭ.
- ಧಾರ್ಮಿಕ ಜಾಗೃತಿಗಾಗಿ ಹರಕ್ಕಾ ಸಂಸ್ಥೆ ಸ್ಥಾಪನೆ.
- ಹೋರಾಟದಲ್ಲಿ ಗೆರಿಲ್ಲಾ ಯುದ್ಧ ತಂತ್ರ ಬಳಕೆ
- ಆಂಗ್ಲರು ತತ್ತರಿಸಿ ಹೋದರು.
- ಹಳ್ಳಿಗಳಿಂದ ಹೋರಾಟಕ್ಕೆ ಬೆಂಬಲ.
- ಸಾವಿರಾರು ಸ್ತ್ರೀ–ಪುರುಷರು ಈಕೆಯ ಸೈನ್ಯ ಸೇರ್ಪಡೆ.
- ಇವಳ ಬಂಧನಕ್ಕೆ ಡಾ.ಹರಾಲುನಿಂದ ಬ್ರಿಟಿಷರಿಗೆ ನೆರವು
- ಕಮಾಂಡೋ ಮ್ಯಾಕ್ ಡೊನಾಲ್ಡನಿಂದ ಬಂಧನ.
- ಸ್ವಾಂತಂತ್ರ್ಯ ಸಿಗುವ ತನಕ ಜೈಲುವಾಸ.

**28) ಭದ್ರತಾ ಸಮಿತಿಯ ರಚನೆ, ಕಾರ್ಯಗಳನ್ನು ವಿವರಿಸಿರಿ.**

❖ **ರಚನೆ.**

- ವಿಶ್ವಸಂಸ್ಥೆಯ ಸಚಿವ ಸಂಪುಟ.
- 15 ಮಂದಿ ಸದಸ್ಯರು.
- 5 ಖಾಯಂ ಸದಸ್ಯರನ್ನು ಹೊಂದಿದೆ.
- ಪ್ರಮುಖ ನಿರ್ಧಾರಕ್ಕೆ ಖಾಯಂ ಸದಸ್ಯ ರಾಷ್ಟ್ರದ ಸಮ್ಮತಿ ಅಗತ್ಯ.
- ಸಾಮಾನ್ಯ ಸಭೆಯಿಂದ 10 ಹಂಗಾಮಿ ಸದಸ್ಯರ ಆಯ್ಕೆ.

❖ **ಕಾರ್ಯಗಳು.**

- ಜಾಗತಿಕ ಸಮಸ್ಯೆಗೆ ಶಾಂತಿಯುತ ಪರಿಹಾರಕ್ಕೆ ಯತ್ನ.
- ಶಾಂತಿ & ಸುವ್ಯವಸ್ಥೆಗೆ ಶಾಂತಿಪಾಲನಾ ಪಡೆ ಬಳಕೆ.
- ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ನೇಮಕ.
- ಮಹಾಕಾರ್ಯದರ್ಶಿ ಹುದ್ದೆಗೆ ಉಮೇದುವಾರಿಕೆ ಸೂಚಿಸುತ್ತದೆ.

**29) ನಿರುದ್ಯೋಗದ ಪರಿಣಾಮಗಳನ್ನು ಪಟ್ಟಿ ಮಾಡಿರಿ.**

- ಬಡತನ.
- ಅನಾರೋಗ್ಯ.
- ಭ್ರಷ್ಟಾಚಾರ.
- ಕೌಟುಂಬಿಕ ವಿಘಟನೆ.
- ಮೋಸ.
- ವಂಚನೆ.
- ಕಳ್ಳತನ
- ವ್ಯಭಿಚಾರ.

**30) ಪೂರ್ವ ಮತ್ತು ಪಶ್ಚಿಮ ಕರಾವಳಿಯ ವ್ಯತ್ಯಾಸ ತಿಳಿಸಿರಿ.**

| ಪಶ್ಚಿಮ ಕರಾವಳಿ | ಪೂರ್ವ ಕರಾವಳಿ |
|---|---|
| • ಕಛ್‌ನಿಂದ ಕನ್ಯಾಕುಮಾರಿಯವರೆಗೆ ವಿಸ್ತಾರ. | • ಕನ್ಯಾಕುಮಾರಿಯಿಂದ ಗಂಗಾನದಿ ಮುಖಜ ಭೂಮಿಯವರೆಗೆ ವಿಸ್ತಾರ. |
| • ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಹಬ್ಬಿದೆ. | • ಪೂರ್ವಘಟ್ಟ ಮತ್ತು ಬಂಗಾಳಕೊಲ್ಲಿ ನಡುವೆ ಹಬ್ಬಿದೆ. |
| • ಮಲಬಾರ್ ತೀರ, ಕೆನರಾ ತೀರ, ಕೊಂಕಣ ತೀರ ಎಂದು ವಿಂಗಡಣೆ. | • ಉತ್ಕಲ ತೀರ, ಕೋರಮಂಡಲ ತೀರ ಎಂದು ವಿಂಗಡಣೆ. |
| • ಮುಂಬೈ, ಮಂಗಳೂರು, ಕೊಚ್ಚಿ ಪ್ರಮುಖ ಬಂದರು. | • ಅಗಲ ಮತ್ತು ಸಮತಟ್ಟಾಗಿದೆ. |

**31) ಅರಣ್ಯ ಸಂರಕ್ಷಣಾ ವಿಧಾನಗಳಾವುವು?**

- ಘರ್ಷಿತ ಮರಗಳ ತೆಗೆಯುವುದು.
- ಅರಣ್ಯ ರೋಗ ನಿಯಂತ್ರಣ.
- ಸಸಿ ನೆಡುವುದು.
- ಬೀಜ ಹರಡುವುದು.
- ಅಕ್ರಮ ಮರ ಕಡಿಯುವುದಕ್ಕೆ ನಿಷೇಧ.
- ಮೇಯಿಸುವಿಕೆಗೆ ತಡೆ.
- ಮರ ನೆಡಲು ಪ್ರೋತ್ಸಾಹ.
- ಸಾಮಾಜಿಕ ಅರಣ್ಯ ಯೋಜನೆ.

**ಅಥವಾ**

**ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

- ಭೂಸ್ವರೂಪಗಳು.
- ವಾಯುಗುಣ.
- ಮಣ್ಣಿನ ಲಕ್ಷಣಗಳು.
- ಭೂ ಹಿಡುವಳಿ.
- ಜನಸಂಖ್ಯೆ.
- ಉದ್ಯೋಗ.
- ಜನರ ಮನೋಭಾವ.
- ಸಾಮಾಜಿಕ ಪರಿಸ್ಥಿತಿ.
- ಮಾರುಕಟ್ಟೆ.
- ತಾಂತ್ರಿಕತೆ.
- ನೀರಾವರಿ ಸೌಲಭ್ಯ.
- ಭೂ ಒಡೆತನ.

**32) ಗ್ರಾಮೀಣಾಭಿವೃದ್ಧಿಯ ಮಹತ್ವ ತಿಳಿಸಿರಿ**

- ಜ್ಞಾನ, ಕೌಶಲ್ಯ & ದುಡಿಯುವ ಸಾಮರ್ಥ್ಯ ಹೆಚ್ಚಳ.
- ಕೃಷಿ & ಕೃಷಿಯೇತರ ವಲಯದ ಅಭಿವೃದ್ಧಿ.
- ಅಧಿಕ ಉದ್ಯೋಗ ಸೃಷ್ಟಿ.
- ಗ್ರಾಮೀಣ ಅರ್ಥವ್ಯವಸ್ಥೆ ಬಲಪಡಿಸುವುದು.
- ಆದಾಯ ಹೆಚ್ಚಳ.
- ಕೃಷಿ ಸಂಸ್ಕರಣೆ.
- ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ.

**ಅಥವಾ**

**ಆರ್ಥಿಕ ಯೋಜನೆಯು ದೇಶದ ಸಮಗ್ರ ಅಭಿವೃದ್ಧಿಯ ಒಂದು ತಂತ್ರವಾಗಿದೆ. ಹೇಗೆ ?**

- ನಿರ್ದಿಷ್ಟ ದೇಯೋದ್ದೇಶಗಳ ಈಡೇರಿಕೆ.
- ಏನನ್ನು ಉತ್ಪಾದಿಸಬೇಕೆಂಬುದರ ನಿರ್ಧಾರ.
- ಉತ್ಪಾದನೆಯ ಪ್ರಮಾಣ ನಿರ್ಧಾರ.
- ಉತ್ಪಾದನೆಯ ವಿಧಾನದ ನಿರ್ಧಾರ.
- ಆದ್ಯತೆಯ ಮೇಲೆ ಕ್ರಮಕೈಗೊಳ್ಳುವುದು.
- ಸಂಪನ್ಮೂಲಗಳ ಸಮರ್ಥ ಬಳಕೆ.

**33) ಅಂಚೆ ಕಚೇರಿಗಳು ಸಹ ಅನೇಕ ಹಣಕಾಸಿನ ವ್ಯವಹಾರಗಳನ್ನು ಕೈಗೊಳ್ಳುತ್ತಿವೆ. ಹೇಗೆ?**

- ರಾಷ್ಟ್ರೀಯ ಉಳಿತಾಯ ಪತ್ರ.
- ಅಂಚೆ ಉಳಿತಾಯ ಖಾತೆ.
- ಕಿಸಾನ್ ವಿಕಾಸ ಪತ್ರ.
- ಮಹೆಯಾನ ತೀರು ಠೇವಣಿಗಳು.
- ಅಂಚೆ ವಿಮೆ.
- ನಿವೃತ್ತಿ ವೇತನ.
- ಹಣದ ವರ್ಗಾವಣೆ.

**ಅಥವಾ**

**ಭಾರತದ ಆರ್ಥಿಕ ಪ್ರಗತಿಯಲ್ಲಿ ಅಭಿವೃದ್ಧಿಯಲ್ಲಿ ಉದ್ಯಮಿಗಳ ಪಾತ್ರವೇನು?**

- ಅಧಿಕ ಉದ್ಯೋಗ ಸೃಷ್ಟಿ.
- ರಾಷ್ಟ್ರೀಯ ಆದಾಯ ಮತ್ತು ತಲಾ ವರಮಾನ ಹೆಚ್ಚಳ.
- ಮಾರುಕಟ್ಟೆ ಅಭಿವೃದ್ಧಿ.
- ಜನರ ಜೀವನಮಟ್ಟ ಸುಧಾರಣೆ.
- ಕೈಗಾರಿಕಾಭಿವೃದ್ಧಿ.
- ಸಮಾಜದ ಏಳಿಗೆಗೆ ಸಹಾಯ.
- ರಫ್ತು ವ್ಯಾಪಾರ ಹೆಚ್ಚಳ.

**V ಎಂಟು-ಹತ್ತು ವಾಕ್ಯದಲ್ಲಿ ಉತ್ತರಿಸಿರಿ. 4*4=16**

**34) ಸ್ವಾತಂತ್ರ್ಯ ಹೋರಾಟದಲ್ಲಿ ಬಾಲಗಂಗಾಧರ ತಿಲಕರವರ ಪಾತ್ರವನ್ನು ಬರೆಯಿರಿ.**

- ತೀವ್ರವಾದಿ ಬಣದ ಪ್ರಮುಖ ನಾಯಕರು.
- ಬಂಗಾಳದ ವಿಭಜನೆಯ ವಿರುದ್ಧ ಹೋರಾಟ.
- ಸ್ವದೇಶಿ ಚಳುವಳಿಯಲ್ಲಿ ಭಾಗಿ.
- "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು, ಅದನ್ನು ಪಡೆದೆ ತೀರುವೆ" ಎಂದು ಘೋಷಣೆ.
- ಸ್ವಾತಂತ್ರ್ಯ ಹೋರಾಟಕ್ಕೆ ಜನರ ಸಂಘಟನೆ.
- ಧಾರ್ಮಿಕ ಆಚರಣೆಗಳ ಮೂಲಕ ಜನಸಂಘಟನೆ.
- ಕ್ರಾಂತಿಕಾರಿ ಬರವಣಿಗೆಗಳು.
- ಕೇಸರಿ, ಮರಾಠ ಪತ್ರಿಕೆಗಳ ಪ್ರಕಟಣೆ.
- ಬ್ರಿಟಿಷರಿಂದ ಬಂಧನ.
- ಗೀತಾ ರಹಸ್ಯ ಗ್ರಂಥ ರಚನೆ.

**35) ಬ್ರಿಟಿಷರ ಕಾಲದಲ್ಲಿ ಪೋಲಿಸ್ ವ್ಯವಸ್ಥೆಯಲ್ಲಿ ಜಾರಿಗೆ ತಂದ ಸುಧಾರಣೆಗಳಾವುವು?**

- ಕಾರ್ನ್‌ವಾಲೀಸನಿಂದ ಪೋಲಿಸ್ ವಿಭಾಗ ಸ್ಥಾಪನೆ.
- ಸೂಪರಿಡೆಂಟೆಂಟ್ ಆಫ್ ಪೊಲೀಸ್ ಹುದ್ದೆ ಸೃಷ್ಟಿ.
- ಜಿಲ್ಲೆಗಳನ್ನು ಠಾಣೆಗಳಾಗಿ ವಿಭಜನೆ.
- ಕೊತ್ವಾಲ ಠಾಣೆಗಳ ಮೇಲ್ವಿಚಾರಕ.
- ಹಳ್ಳಿಗಳು ಚೌಕಿದಾರನ ಅಧೀನ.
- ಕೊತ್ವಾಲರಿಗೆ ಹಳ್ಳಿಗಳ ಅಪರಾಧ ಚಟುವಟಿಕೆಗಳ ನಿಯಂತ್ರಣ ಜವಾಬ್ದಾರಿ.
- ಪೊಲೀಸ್ ಕಾಯ್ದೆ ಜಾರಿ.
- ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನ.
- ಪೋಲಿಸ್ ಕಮಿಷನ್ ಕಾಯ್ದೆ ಜಾರಿ. **ಅಥವಾ**

**ಬ್ರಿಟಿಷ್‌ರು ಭಾರತದಲ್ಲಿ ರೂಪಿಸಿದ ನ್ಯಾಯಾಂಗ ವ್ಯವಸ್ಥೆ ವಿಶ್ಲೇಷಿಸಿರಿ**

- ಪ್ರತಿ ಜಿಲ್ಲೆ ಎರಡು ಬಗೆಯ ನ್ಯಾಯಾಲಯ ಹೊಂದಿತ್ತು.
- ದಿವಾನಿ ಮತ್ತು ಫೌಜದಾರಿ ಅದಾಲತ್ ನ್ಯಾಯಾಲಯಗಳು.
- ಹಿಂದೂಗಳಿಗೆ ಹಿಂದೂ ಶಾಸ್ತ್ರಗ್ರಂಥಗಳ ಪ್ರಕಾರ ನ್ಯಾಯದಾನ.
- ಮುಸ್ಲಿಮರಿಗೆ ಷರಿಯತ್ ಕಾನೂನಿನ ಅನ್ವಯ
- ಅಪರಾಧ ಪ್ರಕರಣದಲ್ಲಿ ಇಸ್ಲಾಂ ಕಾನೂನಿನನ್ವಯ ವಿಚಾರಣೆ.
- ಯುರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಗರಿಕ ನ್ಯಾಯಾಲಯ ಕಾರ್ಯನಿರ್ವಹಣೆ.
- ಅಪರಾಧ ನ್ಯಾಯಾಲಯ ಖಾಜಿಗಳ ಅಧೀನದಲ್ಲಿದ್ದವು.
- .ಅಪರಾಧ ನ್ಯಾಯಾಲಯ ಬ್ರಿಟಿಷರ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು.

**36) ಆರ್ಥಿಕ ಅಸಮಾನತೆಯನ್ನು ಹೊಗಲಾಡಿಸಲು ಇರುವ ಮಾರ್ಗೋಪಾಯಗಳಾವುವು?**

- ಉತ್ತಮ ಆರ್ಥಿಕ ಸುಧಾರಣೆ.
- ಯೋಜನಾ ಬದ್ಧ ಹಣಕಾಸಿನ ನಿರ್ವಹಣೆ.
- ಒಳ್ಳೆಯ ತೆರಿಗೆ ವಿಧಾನ.
- ಸಣ್ಣ ಹಾಗೂ ಗುಡಿ ಕೈಗಾರಿಕೆಗಳ ಅಭಿವೃದ್ಧಿ.
- ಭೂ ಸುಧಾರಣೆ.
- ಕಾರ್ಮಿಕರ ಪರ ಧೋರಣೆ.
- ಸಾಮಾಜಿಕ ಭದ್ರತೆ.
- ಬಂಡವಾಳಶಾಹಿತ್ವ ನಿರ್ಮೂಲನೆ.
- ರಾಷ್ಟ್ರೀಯ ಆದಾಯದ ಅಸಮಾನ ಹಂಚಿಕೆಗೆ ತಡೆ.

**37) ಮಣ್ಣಿನ ಸವೆತ ತಡೆಗಟ್ಟುವ ವಿಧಾನಗಳಾವುವು?**

- ಇಳಿಜಾರಿಗೆ ಅಡ್ಡಲಾಗಿ ಉಳುಮೆ.
- ಅಡ್ಡ ಬದುಗಳ ನಿರ್ಮಾಣ.
- ಹಂತ ಹಂತ ವ್ಯವಸಾಯ ಕ್ಷೇತ್ರಗಳ ನಿರ್ಮಾಣ.
- ಅರಣ್ಯ ನಾಶ ತಡೆ.
- ಅರಣ್ಯ ಬೆಳೆಸಲು ಪ್ರೋತ್ಸಾಹ.
- ಅತಿಯಾದ ಮೇಯಿಸುವುದಕ್ಕೆ ನಿಯಂತ್ರಣ.
- ನೀರಿನ ಯೋಜಿತ ಬಳಕೆ.
- ಚೆಕ್ ಡ್ಯಾಮ್‌ಗಳ ನಿರ್ಮಾಣ

**VI 38) ಭಾರತದ ಅಂದವಾದ ನಕ್ಷೆ ಬಿಡಿಸಿ ಎ. ಕೋಯ್ನಾ ಬಿ. ಸೇಲಂ ಸಿ. ತೂತಕುಡಿ ಡಿ. ನರೋರಾ ಗುರುತಿಸಿರಿ. 1+4=5**

